28



**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್. ಕೆ ಇವರು ನಿಯಮ 330ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಪ್ರಶ್ನೆ:-** ರಾಜ್ಯದ ಬಹುತೇಕ ಕಾರಾಗೃಹಗಳಲ್ಲಿ ಅವುಗಳ ಸಾಮರ್ಥ್ಯಕ್ಕಿಂತ ಹೆಚ್ಚಿನ ಖೈದಿಗಳನ್ನು ಇರಿಸಲಾಗಿದೆ. ಈ ಕಾರಣದಿಂದಾಗಿ ಕಾರಾಗೃಹಗಳಲ್ಲಿ ಕೈದಿಗಳ ದಟ್ಟಣೆಯೇ ಸಮಸ್ಯೆಯಾಗಿದ್ದು, ಖೈದಿಗಳ ಸ್ಥಳಾಂತರಕ್ಕೆ ಸರ್ಕಾರ ಇದುವರೆಗೆ ಯಾವುದೇ ಪೂರಕ ಕ್ರಮಗಳನ್ನು ತೆಗೆದುಕೊಂಡಿಲ್ಲ. ಕಾರಾಗೃಹಗಳಲ್ಲಿ ಭದ್ರತಾ ಮೌಲ್ಯಮಾಪನ ಮತ್ತು ಖೈದಿಗಳ ಪ್ರತ್ಯೇಕತೆ ನಿಯಮಗಳು ಸೂಕ್ತವಾಗಿ ಜಾರಿಯಾಗಿಲ್ಲ. ಕಾರಾಗೃಹಗಳಲ್ಲಿ ವ್ಯಾಪಕ ಸುಧಾರಣೆ ತರುವ ನಿಟ್ಟಿನಲ್ಲಿ ಅಲ್ಲಿನ ಸಮಸ್ಯೆಗಳ ನಿವಾರಣೆಗೆ ಜೈಲು ಆಡಳಿತದಲ್ಲಿ ಪಾರದರ್ಶಕತೆ ತರುವುದು. ಮತ್ತು ಜೈಲು ಆಡಳಿತದಲ್ಲಿ ತಂತ್ರಜ್ಞಾನದ ಸಮರ್ಪಕ ಮತ್ತು ಪರಿಣಾಮಕಾರಿ ಬಳಕೆ ಆಗಬೇಕಾದ ಅನಿವಾರ್ಯತೆ ಇದ್ದರೂ ಈ ಕುರಿತು ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಸಂಪೂರ್ಣ ವಿಫಲವಾಗಿದೆ.

ಕಾರಾಗೃಹಗಳು ಪರಿವರ್ತನೆಯ ಕೇಂದ್ರಗಳಾಗಬೇಕು ಅಪರಾಧಿಯು ಶಿಕ್ಷೆಮುಗಿಸಿ ಜೈಲಿನಿಂದ ಹೊರಬರುವಾಗ ಮನಪರಿವರ್ತನೆ ಹೊಂದಿ, ಸಮಾಜದಲ್ಲಿ ಉತ್ತಮ ನಾಗರೀಕನಾಗಿ ಬಾಳಬೇಕು ಎಂಬ ಆಶಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಸರಿಯಾದ ಮತ್ತು ಪರಿಣಾಮಕಾರಿಯಾದ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ:-**

**ರಾಜ್ಯದ ಕಾರಾಗೃಹಗಳಲ್ಲಿ ಬಂದಿಗಳ ದಟ್ಟಣೆ ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.**

- ದಿನಾಂಕ: 31.07.2025 ರಲ್ಲಿದ್ದಂತೆ ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಬಂದಿಗಳ ಕಾರಾಗೃಹವಾರು ವಿವರಗಳನ್ನು **ಅನುಬಂಧದಲ್ಲಿರಿಸಿದೆ**.
- ರಾಜ್ಯದ ಕಾರಾಗೃಹಗಳಲ್ಲಿ ಬಂದಿಗಳ ದಟ್ಟಣೆಯನ್ನು ಕಡಿಮೆ ಮಾಡಲು ನೂತನ ಕಾರಾಗೃಹಗಳನ್ನು ನಿರ್ಮಾಣ ಮಾಡುವ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ವಿವರ ಕೆಳಕಂಡಂತಿರುತ್ತದೆ.

| ಕ್ರ. ಸಂ. | ನೂತನ ಕಾರಾಗೃಹಗಳ ನಿರ್ಮಾಣ | ಬಂದಿಗಳ ಸ್ಥಳಾವಕಾಶ | ಷರಾ |
|---|---|---|---|
| 1. | ಕೇಂದ್ರ ಕಾರಾಗೃಹ, ವಿಜಯಪುರ | 1000 | ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ. |
| 2. | ಕೇಂದ್ರ ಕಾರಾಗೃಹ, ಬೀದರ್ | 1000 | |
| 3. | ಗರಿಷ್ಠ ಭದ್ರತಾ ಕೇಂದ್ರ ಕಾರಾಗೃಹ, ಬೆಂಗಳೂರು | 1000 | |
| 4. | ಕೇಂದ್ರ ಕಾರಾಗೃಹ, ಮಂಗಳೂರು | 1000 | 1ನೇ ಹಂತದ ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ. |
| 5. | ಕೇಂದ್ರ ಕಾರಾಗೃಹ, ಬೆಂಗಳೂರು ಗ್ರಾಮಾಂತರ, ದೇವನಹಳ್ಳಿ | 600 | ಕಾಮಗಾರಿ ಪ್ರಗತಿಯಲ್ಲಿದೆ. |

| ಕ್ರ. ಸಂ. | ನೂತನ ಕಾರಾಗೃಹಗಳ ನಿರ್ಮಾಣ | ಬಂದಿಗಳ ಸ್ಥಳಾವಕಾಶ | ಷರಾ |
|---|---|---|---|
| 6. | ಗರಿಷ್ಠ ಭದ್ರತಾ ಕೇಂದ್ರ ಕಾರಾಗೃಹ, ಶಿವಮೊಗ್ಗ | 320 | ಕಾಮಗಾರಿ ಪ್ರಗತಿಯಲ್ಲಿದೆ. |
| 7. | ತಾಲ್ಲೂಕು ಕಾರಾಗೃಹ ಅರಸೀಕೆರೆ | 50 | ಕಾಮಗಾರಿ ಮುಕ್ತಾಯಗೊಂಡಿರುತ್ತದೆ. |
| 8. | ತಾಲ್ಲೂಕು ಕಾರಾಗೃಹ ಹಳಿಯಾಳ | 100 | |
| 9. | ತಾಲ್ಲೂಕು ಕಾರಾಗೃಹ ಹರಪ್ಪನಹಳ್ಳಿ | 100 | |
| 10. | ತಾಲ್ಲೂಕು ಕಾರಾಗೃಹ ವಿರಾಜಪೇಟೆ | 80 | ಕಾಮಗಾರಿ ಮುಕ್ತಾಯ ಹಂತದಲ್ಲಿರುತ್ತದೆ. |
| 11. | ತಾಲ್ಲೂಕು ಕಾರಾಗೃಹ ಆಳಂದ | 125 | |
| | **ಒಟ್ಟು** | **5375** | |

- ರಾಜ್ಯದ 10 ವಿವಿಧ ಕಾರಾಗೃಹಗಳ ಆವರಣದಲ್ಲಿ 1,475 ಬಂದಿಗಳಿಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸಲು ಹೆಚ್ಚುವರಿ ಬ್ಯಾರಕ್ ನಿರ್ಮಾಣ ಕಾಮಗಾರಿ ಮುಕ್ತಾಯಗೊಂಡಿರುತ್ತದೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ಕಾರಾಗೃಹ | ಹೆಚ್ಚುವರಿ ಸ್ಥಳಾವಕಾಶ |
|---|---|---|
| 1. | ಕೇಂದ್ರ ಕಾರಾಗೃಹ, ಕಲಬುರ್ಗಿ | 300 |
| 2. | ಕೇಂದ್ರ ಕಾರಾಗೃಹ, ಮೈಸೂರು | 255 |
| 3. | ಕೇಂದ್ರ ಕಾರಾಗೃಹ, ಬಳ್ಳಾರಿ | 300 |
| 4. | ಜಿಲ್ಲಾ ಕಾರಾಗೃಹ, ಕೊಪ್ಪಳ | 150 |
| 5. | ಜಿಲ್ಲಾ ಕಾರಾಗೃಹ, ಹಾವೇರಿ | 100 |
| 6. | ಜಿಲ್ಲಾ ಕಾರಾಗೃಹ, ರಾಮನಗರ | 80 |
| 7. | ಜಿಲ್ಲಾ ಕಾರಾಗೃಹ, ತುಮಕೂರು | 100 |
| 8. | ತಾಲ್ಲೂಕು ಕಾರಾಗೃಹ, ಹುಬ್ಬಳ್ಳಿ | 80 |
| 9. | ತಾಲ್ಲೂಕು ಕಾರಾಗೃಹ, ಗೋಕಾಕ | 60 |
| 10. | ಬಯಲು ಕಾರಾಗೃಹ ದೇವನಹಳ್ಳಿ | 50 |
| | **ಒಟ್ಟು** | **1475** |

- ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ-2021ರ ಅಧ್ಯಾಯ-11 ರಲ್ಲಿ ಬಂದಿಗಳ ವರ್ಗೀಕರಣ ಮತ್ತು ಪ್ರತ್ಯೇಕತೆ (Classification & Separation of Prisoners)

ಕುರಿತು ತಿಳಿಸಿದ್ದು, ಅದರನ್ವಯ ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಬಂದಿಗಳ ವರ್ಗೀಕರಣ ಮತ್ತು ಪ್ರತ್ಯೇಕತೆ ಕುರಿತು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.

- ಕಾರಾಗೃಹಗಳಲ್ಲಿ ಬಂದಿಗಳ ದಟ್ಟಣೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ, ಹೆಚ್ಚಿನ ಬಂದಿಗಳ ದಟ್ಟಣೆಯನ್ನು ಹೊಂದಿರುವ ಕಾರಾಗೃಹಗಳಿಂದ ಕಡಿಮೆ ಬಂದಿಗಳ ದಟ್ಟಣೆಯನ್ನು ಹೊಂದಿರುವ ಕಾರಾಗೃಹಗಳಿಗೆ ಬಂದಿಗಳನ್ನು ವರ್ಗಾವಣೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**ಜೈಲು ಆಡಳಿತದಲ್ಲಿ ಪಾರದರ್ಶಕತೆ ತರುವುದು ಮತ್ತು ಜೈಲು ಆಡಳಿತದಲ್ಲಿ ತಂತ್ರಜ್ಞಾನದ ಸಮರ್ಪಕ ಮತ್ತು ಪರಿಣಾಮಕಾರಿ ಬಳಕೆ ಕುರಿತು.**

- ಕಾರಾಗೃಹ ಇಲಾಖೆಯಲ್ಲಿ ಲಭ್ಯವಿರುವ ಎಲ್ಲಾ ಭದ್ರತಾ ಉಪಕರಣಗಳನ್ನು ದುರಸ್ತಿ ಪುನರ್‌ಬಳಕೆಗಾಗಿ ಮುಖ್ಯ ಅಧೀಕ್ಷಕರು / ಅಧೀಕ್ಷಕರ ವಿತ್ತಾಧಿಕಾರ ವ್ಯಾಪ್ತಿಯಡಿಯಲ್ಲಿ ತಕ್ಷಣವೇ ಭದ್ರತಾ ಉಪಕರಣಗಳನ್ನು ದುರಸ್ತಿ ಮತ್ತು ವಾರ್ಷಿಕ ನಿರ್ವಹಣೆ ಮಾಡಲು ಕ್ರಮ ವಹಿಸುವಂತೆ ಸೂಚಿಸಲಾಗಿದೆ.

- ಪ್ರಸ್ತುತ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳ ನಿಯಂತ್ರಣಕ್ಕೆ ಅತ್ಯಾಧುನಿಕ ಮಾದರಿಯ ತಪಾಸಣಾ ಉಪಕರಣಗಳನ್ನು ಖರೀದಿಸಲಾಗಿರುತ್ತದೆ. ಭದ್ರತಾ ಉಪಕರಣಗಳ ವಿವರ ಕೆಳಕಂಡಂತಿದೆ.

| ಕ್ರ. ಸಂ | ಭದ್ರತಾ ಉಪಕರಣಗಳ ವಿವರ |
|---|---|
| 01 | X-Ray Baggage Scanner |
| 02 | FG-1 Security Pole |
| 03 | HHMD |
| 04 | DFMD |
| 05 | Non Linear Junction Detector (NLJD) |
| 06 | Mobility Enhanced Spectrum Analyser (MESA) |
| 07 | Deep Search Metal Detector (DSMD) |
| 08 | T-HCBS (Tower of Hormonius call Blocking system) |
| 09 | Mobile Jammer |
| 10 | Body worn Camera |
| 11 | CCTV |

- ಕೇಂದ್ರ ಕಾರಾಗೃಹ ಬೆಂಗಳೂರಿನಲ್ಲಿರುವ 280 ಸಂಖ್ಯೆ ಸಿಸಿಟಿವಿಗಳಿಗೆ AI-Powered Audio Video Analytics System ಗಳನ್ನು ಅಳವಡಿಸಲಾಗಿದೆ.

- ರಾಜ್ಯದ 08 ಕಾರಾಗೃಹಗಳಲ್ಲಿರುವ 66 ಸಂಖ್ಯೆ ಹಳೆಯ 2ಜಿ ಮೊಬೈಲ್ ಜಾಮರ್‌ಗಳನ್ನು ರಿಪೇರಿ, 4ಜಿ/5ಜಿ ಗೆ ಮೇಲ್ದರ್ಜೆಗೇರಿಸಿ ಮತ್ತು 03 ವರ್ಷಗಳ ವಾರ್ಷಿಕ ನಿರ್ವಹಣೆ ಕೈಗೊಳ್ಳಲು ಆದೇಶಿಸಲಾಗಿದೆ. ಕೇಂದ್ರ ಕಾರಾಗೃಹ ಮೈಸೂರು ಹೊರತುಪಡಿಸಿ ಉಳಿದ ಕೇಂದ್ರ ಕಾರಾಗೃಹಗಳಲ್ಲಿ ಮೊಬೈಲ್ ಜಾಮರ್‌ಗಳ ರಿಪೇರಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಮುಕ್ತಾಯಗೊಂಡಿದೆ.

- ಕೇಂದ್ರ ಕಾರಾಗೃಹ ಬೆಂಗಳೂರಿನಲ್ಲಿ 03 ಸಂಖ್ಯೆ T-HCBS (Tower of Harmonious call blocking system) ಟವರ್‌ಗಳನ್ನು ನಿರ್ಮಾಣ ಮಾಡಲಾಗಿದೆ.

- ಅತ್ಯಾಧುನಿಕ ಮಾದರಿಯ 19 ಸಂಖ್ಯೆಯ ಬ್ಯಾಗೇಜ್ ಸ್ಕ್ಯಾನರ್ ಖರೀದಿಸಿ ಕಾರಾಗೃಹಗಳಿಗೆ ಒದಗಿಸಲಾಗಿದೆ.

- ಸರ್ಕಾರದ ಸುತ್ತೋಲೆ ಸಂಖ್ಯೆ: ಹೆಚ್‌ಡಿ 03 ಪಿಆರ್‌ಎ 2010, ದಿನಾಂಕ: 22.03.2010ರಲ್ಲಿ ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳ ಬಳಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಅನಿರೀಕ್ಷಿತ ತಪಾಸಣೆಗಳನ್ನು ನಡೆಸಲು ಸಂಬಂಧಪಟ್ಟ ಪೊಲೀಸ್ ಆಯುಕ್ತರು / ಜಿಲ್ಲಾ ಪೊಲೀಸ್ ಅಧೀಕ್ಷಕರುಗಳು ಹಾಗೂ ಎಲ್ಲಾ ಕಾರಾಗೃಹಗಳ ಮುಖ್ಯ ಅಧೀಕ್ಷಕರು / ಅಧೀಕ್ಷಕರುಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

- ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ಬಂದಿಗಳು ಮೊಬೈಲ್ ಫೋನ್‌ಗಳನ್ನು ಹಾಗೂ ಸಂವಹನ ಉದ್ದೇಶಕ್ಕಾಗಿ ಇತರೆ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಸಾಧನಗಳ ಬಳಕೆಯನ್ನು ಮಾಡದಂತೆ ಮತ್ತು ಯಾವುದೇ ರೀತಿಯ ಮಾದಕ ವಸ್ತುಗಳು, ನಿಷೇಧಿತ ವಸ್ತುಗಳ ಬಳಕೆಯನ್ನು ಮಾಡದಂತೆ ತಡೆಗಟ್ಟುವ ನಿಟ್ಟಿನಲ್ಲಿ, ಸೂಕ್ತ ಕಾನೂನು ಕ್ರಮವನ್ನು ಜರುಗಿಸುವ ಸಂಬಂಧ, ಕರ್ನಾಟಕ ಕಾರಾಗೃಹಗಳ ನಿಯಮಗಳು-1974ರ ನಿಯಮ 42(3)ರಲ್ಲಿನ ನಿಷೇದಿತ ವಸ್ತುಗಳ ಪಟ್ಟಿಗೆ (ಕರ್ನಾಟಕ ಕಾರಾಗೃಹ (ತಿದ್ದುಪಡಿ) ನಿಯಮಗಳು-2022) ಅವಶ್ಯಕ ತಿದ್ದುಪಡಿಯನ್ನು ಹಾಗೂ ಕರ್ನಾಟಕ ಬಂದೀಖಾನೆಗಳ ಅಧಿನಿಯಮ, 1963ರ ಕಲಂ 42ಕ್ಕೆ (ಕರ್ನಾಟಕ ಬಂದೀಖಾನೆಗಳ (ತಿದ್ದುಪಡಿ) ಅಧಿನಿಯಮ, 2022) ಅವಶ್ಯಕ ತಿದ್ದುಪಡಿಯನ್ನು ಮಾಡಲಾಗಿರುತ್ತದೆ.

- ರಾಜ್ಯದ ಕಾರಾಗೃಹಗಳಲ್ಲಿ ಭದ್ರತೆ ಮತ್ತು ಅಪರಾಧಗಳ ನಿಯಂತ್ರಣಕ್ಕಾಗಿ ಸಂಬಂಧಪಟ್ಟ ಪೊಲೀಸ್ ಆಯುಕ್ತರು / ಜಿಲ್ಲಾ ಪೊಲೀಸ್ ಅಧೀಕ್ಷಕರುಗಳ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ಪುನರ್ ರಚಿಸಲಾಗಿರುತ್ತದೆ.

- ರಾಜ್ಯದ ಕಾರಾಗೃಹಗಳಲ್ಲಿ ಮೊಬೈಲ್ ಫೋನ್ ಗಳು ಮತ್ತು ಇತರ ಯಾವುದೇ ರೀತಿಯ ನಿಷೇಧಿತ ವಸ್ತುಗಳ ಕಳ್ಳ ಸಾಗಾಣಿಕೆಯನ್ನು ಮತ್ತು ಅಪರಾಧ ಚಟುವಟಿಕೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಂಬಂಧಪಟ್ಟ ಪೊಲೀಸ್ ಆಯುಕ್ತರು / ಜಿಲ್ಲಾ ಪೊಲೀಸ್ ಅಧೀಕ್ಷಕರುಗಳು ಹಾಗೂ ಕಾರಾಗೃಹಗಳ ಮುಖ್ಯ ಅಧೀಕ್ಷಕರು / ಅಧೀಕ್ಷಕರುಗಳಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

- ರಾಜ್ಯದ ಎಲ್ಲಾ ಕಾರಾಗೃಹಗಳಲ್ಲಿ ನಿಷೇಧಿತ ವಸ್ತುಗಳ ಬಳಕೆ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂಬುದರ ಬಗ್ಗೆ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ನಿಗದಿತ ನಮೂನೆಯಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲು ಎಲ್ಲಾ ಕಾರಾಗೃಹಗಳ ಮುಖ್ಯ ಅಧೀಕ್ಷಕರು / ಅಧೀಕ್ಷಕರುಗಳಿಗೆ ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

- ಕರ್ನಾಟಕ ಕಾರಾಗೃಹಗಳ ನಿಯಮಗಳು-1974ರ ಅಧ್ಯಾಯ-XXV ಮತ್ತು ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ-2021ರ ಅಧ್ಯಾಯ-33ರ ಪ್ರಕಾರ ರಾಜ್ಯದ ಎಲ್ಲಾ ಕೇಂದ್ರ / ಜಿಲ್ಲಾ ಕಾರಾಗೃಹಗಳಲ್ಲಿ ಸಂದರ್ಶಕರ ಮಂಡಳಿಯು ಕಾರ್ಯನಿರ್ವಹಿಸುತ್ತಿದ್ದು, ಕಾರಾಗೃಹಗಳ ಸುಗಮ ಆಡಳಿತ ನಿರ್ವಹಣೆ, ಭದ್ರತೆ ಮತ್ತು ಸುಧಾರಣಾ ಕ್ರಮಗಳ ಕುರಿತು ತ್ರೈಮಾಸಿಕವಾಗಿ ಸಭೆಗಳನ್ನು ನಡೆಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುತ್ತದೆ.

**ಕಾರಾಗೃಹಗಳಲ್ಲಿ ಬಂದಿಗಳ ಮನಃ ಪರಿವರ್ತನೆ ಸಂಬಂಧ ಕೈಗೊಳ್ಳಲಾಗುತ್ತಿರುವ ಸುಧಾರಣಾ ಕ್ರಮಗಳು:**

- ಅನಕ್ಷರಸ್ಥ ಬಂದಿಗಳನ್ನು ಸಾಕ್ಷರರನ್ನಾಗಿ ಮಾಡಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಉನ್ನತ ಶಿಕ್ಷಣಕ್ಕಾಗಿ ರಾಜ್ಯ ಮುಕ್ತ ವಿಶ್ವವಿದ್ಯಾಲಯಗಳಲ್ಲಿ ಬಂದಿಗಳಿಗೆ ಶಿಕ್ಷಣ ಕಲ್ಪಿಸಲಾಗುತ್ತಿದೆ.

- ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ಬಂದಿಗಳ ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸಲು ವಿವಿಧ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ.

- ಕಾರಾಗೃಹಗಳಲ್ಲಿ ಗ್ರಂಥಾಲಯಗಳನ್ನು ನಿರ್ಮಿಸಲಾಗಿದ್ದು, ಆಸಕ್ತ ಬಂದಿಗಳ ಅಧ್ಯಯನಕ್ಕೆ ಅನುಕೂಲ ಮಾಡಿಕೊಡಲಾಗಿದೆ.
- ಶಿಕ್ಷಾ ಬಂದಿಗಳ ಮನಪರಿವರ್ತನೆಯ ಉದ್ದೇಶದಿಂದ ಕರ್ನಾಟಕ ಕಾರಾಗೃಹಗಳ ನಿಯಮಗಳ ಪ್ರಕಾರ ಶಿಕ್ಷಾ ಬಂದಿಗಳಿಗೆ ಕೆಲಸ ಹಂಚಿಕೆ ಮಾಡಿ, ಮಾಫಿ ಮತ್ತು ಕೂಲಿ ಹಣವನ್ನು ನೀಡಲಾಗುತ್ತಿರುತ್ತದೆ.

- ಶಿಕ್ಷಾ ಬಂದಿಗಳ ಮನಪರಿವರ್ತನೆಯ ಉದ್ದೇಶದಿಂದ ಕರ್ನಾಟಕ ಕಾರಾಗೃಹಗಳ ನಿಯಮಗಳ ಪ್ರಕಾರ ಶಿಕ್ಷಾ ಬಂದಿಗಳಿಗೆ ಸಾಮಾನ್ಯ ಪೆರೋಲ್ ಮತ್ತು ತುರ್ತು ಪೆರೋಲ್ ರಜೆಯನ್ನು ಮಂಜೂರು ಮಾಡಲಾಗುತ್ತಿರುತ್ತದೆ.

- ಜೀವಾವಧಿ ಶಿಕ್ಷಾ ಬಂದಿಗಳನ್ನು ಸನ್ನಡತೆಯ ಆಧಾರದ ಮೇಲೆ ಪ್ರತಿ ವರ್ಷ 03 ಬಾರಿ ಅವಧಿಪೂರ್ವ ಬಿಡುಗಡೆ ಮಾಡಲಾಗುತ್ತಿದೆ.

- ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯಲ್ಲಿ ಹೆಚ್ಚಿನ ಸುಧಾರಣೆ ತರುವ ನಿಟ್ಟಿನಲ್ಲಿ "ಕರ್ನಾಟಕ ಅಭಿವೃದ್ಧಿ ಮಂಡಳಿ ಕಾಯ್ದೆ 2021" ನ್ನು ಜಾರಿಗೆ ತರಲಾಗಿದೆ.

**ಸಂಖ್ಯೆ: ಹೆಚ್‌ಡಿ 229 ಪಿಆರ್‌ಎ 2025**

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು

## ANNEXURE

## Prison wise Inmate Population as on 31.07.2025

| Sl. No. | Name of the Prison | UTP | CTP | Total |
|---|---|---|---|---|
| 1 | 2 | 4 | 5 | 6 |
| 1 | CENTRAL PRISON, BENGALURU | 3875 | 1141 | 5016 |
| 2 | Open Prison, Devanahalli | 0 | 47 | 47 |
| 3 | District Prison, Ramanagara | 285 | 6 | 291 |
| 4 | District Prison, Kolar | 126 | 7 | 133 |
| 5 | Taluka Prison, K.G.F. | 76 | 0 | 76 |
| 6 | District Prison, Tumakuru | 345 | 13 | 358 |
| 7 | Taluka Prison, Tiptur | 0 | 0 | 0 |
| 8 | District Prison, Chikkaballapura | 245 | 2 | 247 |
| 9 | Taluka Prison, Chinthamani | 101 | 1 | 102 |
| 10 | CENTRAL PRISON, MYSURU | 315 | 472 | 787 |
| 11 | Taluka Prison, K.R. Nagar | 67 | 2 | 69 |
| 12 | Taluka Prison, Nanjangud | 47 | 0 | 47 |
| 13 | District Prison, Chamarajanagar | 137 | 3 | 140 |
| 14 | District Prison, Mandya | 271 | 10 | 281 |
| 15 | District Prison, Hassan | 186 | 5 | 191 |
| 16 | Taluka Prison, Sakaleshpur | 29 | 0 | 29 |
| 17 | District Prison, Madikeri | 176 | 7 | 183 |
| 18 | CENTRAL PRISON, SHIVAMOGGA | 299 | 460 | 759 |
| 19 | WOMEN CENTRAL PRISON, SHIVAMOGGA | 10 | 28 | 38 |
| 20 | Taluka Prison, Sagara | 0 | 0 | 0 |
| 21 | District Prison, Mangaluru | 343 | 10 | 353 |
| 22 | District Prison, Chikkamagaluru | 166 | 4 | 170 |
| 23 | District Prison, Udupi | 148 | 4 | 152 |
| 24 | District Prison, Davangere | 185 | 6 | 191 |
| 25 | District Prison, Chitradurga | 213 | 10 | 223 |
| 26 | CENTRAL PRISON, BELAGAVI | 476 | 366 | 842 |
| 27 | Taluka Prison, Gokak | 63 | 2 | 65 |

| | | | | |
|---|---|---|---|---|
| 28 | Taluka Prison, Bailahongala | 31 | 2 | 33 |
| 29 | District Prison, Karwar | 95 | 7 | 102 |
| 30 | Taluka Prison, Haliyala | 42 | 1 | 43 |
| 31 | CENTRAL PRISON, DHARWAD | 265 | 246 | 511 |
| 32 | Taluka Prison, Hubballi | 150 | 4 | 154 |
| 33 | District Prison, Haveri | 189 | 7 | 196 |
| 34 | District Prison, Gadag | 73 | 6 | 79 |
| 35 | CENTRAL PRISON, VIJAYAPURA | 257 | 228 | 485 |
| 36 | District Prison, Bagalkote | 100 | 11 | 111 |
| 37 | Taluka Prison, Jamkhandi | 60 | 1 | 61 |
| 38 | CENTRAL PRISON, KALABURGI | 306 | 301 | 607 |
| 39 | District Prison, Yadgiri | 45 | 2 | 47 |
| 40 | Taluka Prison, Shorapur | 52 | 0 | 52 |
| 41 | District Prison, Bidar | 121 | 2 | 123 |
| 42 | Taluka Prison, Aurad | 19 | 0 | 19 |
| 43 | Taluka Prison, Humnabad | 55 | 1 | 56 |
| 44 | CENTRAL PRISON, BALLARI | 226 | 251 | 477 |
| 45 | Taluka Prison, Hosapete | 47 | 5 | 52 |
| 46 | Taluka Prison, Hadagali | 39 | 0 | 39 |
| 47 | Taluka Prison, Harappanahalli | 28 | 0 | 28 |
| 48 | District Prison, Raichur | 133 | 4 | 137 |
| 49 | Taluka Prison, Devadurga | 0 | 0 | 0 |
| 50 | Taluka Prison, Lingasugur | 40 | 2 | 42 |
| 51 | District Prison, Koppal | 143 | 6 | 149 |
| 52 | Revenue Prison, Sirsi | 0 | 0 | 0 |
| 53 | Revenue Prison, Sedam | 38 | 1 | 39 |
| 54 | Revenue Prison, Madhugiri | 49 | 0 | 49 |
| Total | | 10787 | 3694 | 14481 |